ಶ್ರೀ ಕೆ. ಬಿ. ಶಾಣಪ್ಪ.—ಈ ಸಂಸ್ಥೆಗೆ ಗ್ರಾಂಟ್ ಬಿಡುಗಡೆ ಮಾಡುವುದನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಮುಖ್ಯಮಂತ್ರಿಗಳು ಪತ್ರ ಕಳುಹಿಸಿಕೊಟ್ಟಿದ್ದಾರೆ. ಆದರೆ ಗ್ರಾಂಟ್ ಹಣವನ್ನು ಬಿಡುಗಡೆ ಮಾಡಬೇಕೆಂದು ಅವರು ಪತ್ರ ಬರೆದರೆ ಮಾತ್ರ ಮುಂದಿನ ಕ್ರಮ ಕೈಕೊಳ್ಳುತ್ತೇವೆಂದು ನಿಮ್ಮ ಇಲಾಖೆಯವರು ಹೇಳುತ್ತಿದ್ದಾರೆ.

ಶ್ರೀ ಜೀವರಾಜ ಆಳ್ವ.—ನಾನು ಇದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್.—ಮಾಡಿಸಲು ಸಾಧ್ಯವಿದ್ದರೆ ಮಾತ್ರ ಮಾಡಿಸಿಕೊಡುತ್ತೇನೆಂದು ಹೇಳಿ

ಅಧ್ಯಕ್ಷರು.—ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಅವರು ಮಾಡಿಸಿಕೊಂಡು ತ್ತಾರೆ.

ವರಾಹಿ ನೀರಾವರಿ ಯೋಜನೆ.

೨೨೬೫. **ಶ್ರೀ ಜಿ. ಎಸ್. ಆಚಾರ್ (ಬೈಂದೂರು).**—ಮಾನ್ಯ ಕಂದಾಯ ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವರಾಹಿ ಜಲ ವಿದ್ಯುತ್ ಯೋಜನೆ ಕಾರ್ಯಾರಂಭ ಮಾಡಿದಾಗ ವಿದ್ಯುತ್ತಾಪದನಾ ಘಟಕಗಳಿಂದ ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನಿಶ್ಚಿತ ಪ್ರಮಾಣದ ನೀರನ್ನು ನೀರಾವರಿಗಾಗಿ ಬಳಸಲು ವರಾಹಿ ನೀರಾವರಿ ಯೋಜನೆಯನ್ನು ರೂಪಿಸಿದ್ದು ನಿಜವಲ್ಲವೆ ?

ಆ) ಈ ಯೋಜನೆಗೆ ಹಿಂದೆ ಶಂಕುಸ್ಥಾಪನೆ ಆಗಿದ್ದು, ಮುಂದಿನ ಕಾರ್ಯಾರಂಭ ಮಾಡಲಾಗುವುದೆಂದು ಸಚಿವರು ಸದನದಲ್ಲಿ ಆಶ್ವಾಸನೆ ನೀಡಿದ್ದರೂ. ಜಲಾಶಯ ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು ?

ಇ) ಈ ಯೋಜನೆಯಲ್ಲಿ ಈ ತನಕ ಯಾವ ಯಾವ ಕೆಲಸಕ್ಕಾಗಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ?

ಈ) ಜಲಾಶಯ ಕಾಮಗಾರಿ ಪ್ರಾರಂಭಿಸಲಾಗುವುದು ಯಾವಾಗ ?

ಶ್ರೀ ಎಸ್. ಆರ್. ಬೊಮ್ಮಾಯಿ (ಯೋಜನಾ, ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಅಣೆಕಟ್ಟಿನ ಕಾರ್ಯ ಆರಂಭ ಮಾಡಲು ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆ ಮಾಡಲು ಅರಣ್ಯ ಸಂರಕ್ಷಣಾ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಅಗತ್ಯ. ಈ ವಿಷಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ೧೯೮೮ ಮಾರ್ಚ್ ಅಂತ್ಯದವರೆಗೆ ಒಟ್ಟು ೧೭೨ ಲಕ್ಷ ರೂಪಾಯಿಗಳು ವ್ಯಯವಾಗಿದ್ದು, ವಿವರಗಳು ಕೆಳಕಂಡಂತಿವೆ.

೧	ಅಣೆಕಟ್ಟಿನ ತಳಪಾಯ ಅನ್ವೇಷಣೆ ಹಾಗೂ ಸರ್ವೆ ಆಫ್ ಇಂಡಿಯಾ ದಿಂದ ಏರಿಯಲ್ ಸರ್ವೆಕ್ಷೆ ನಡೆಸಿರುವುದು	...	೫೪ ಲಕ್ಷ ರೂಪಾಯಿಗಳು.
೨	ಯಂತ್ರೋಪಕರಣಗಳು	...	೧೧ ಲಕ್ಷ ,,
೩	ಯೋಜನಾ ರಸ್ತೆ, ಕಾಮಗಾರಿಗಳು	...	೨೨ ಲಕ್ಷ ,,
೪	ಕಟ್ಟಡಗಳು	...	೩೧ ಲಕ್ಷ ,,
೫	ಸಿಬ್ಬಂದಿ	...	೪ ಲಕ್ಷ ,,
೬	ಇತರೆ	...	೧೦ ಲಕ್ಷ ,,
		ಒಟ್ಟು	೧೭೨ ಲಕ್ಷ ರೂಪಾಯಿಗಳು.

ಈ) ಕೇಂದ್ರ ಸರ್ಕಾರದಿಂದ ಅರಣ್ಯ ಪ್ರದೇಶ ಬಿಡುಗಡೆಯಾದ ನಂತರ ಹಾಗೂ ಸಂಪನ್ಮೂಲ ವನ್ನು ಸರಿಪಡಿಸಿ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಜಿ. ಎಸ್. ಆಚಾರ್ —ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಈ ವರಾಹಿ ಜಲ ವಿದ್ಯುತ್ ಯೋಜನೆಯಿಂದ ಖಾಯಂ ಆಗಿ ನೀರಾವರಿಗಾಗಿ ಬಳಸಲು ನೀರು ಸಿಗುವುದರಿಂದ ಈ ವರಾಹಿ ನೀರಾವರಿ ಯೋಜನೆ ಕೆಲಸ ಇಲ್ಲಿಯವರೆಗೆ ಮುಗಿಯದಿರಲು ಕಾರಣವೇನು? ಈ ಯೋಜನೆ ಸಲುವಾಗಿ ಇಲ್ಲಿಯವರೆಗೆ ೧೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಆದರೆ ಈ ಹಣದ ಮುಕ್ಕಾಲು ಭಾಗ ಈ ಯೋಜನೆಯ ಸಮೀಕ್ಷೆಗಾಗಿ ಮತ್ತು ಸಿಬ್ಬಂದಿಗಾಗಿ ಹೋಗಿದೆ. ಆದಷ್ಟು ಜಾಗ್ರತೆ ಆಂದರೆ ಬರುವ ವರ್ಷ ಈ ಕೆಲಸವನ್ನು ಕೈಗೊಳ್ಳುತ್ತೇವೆಂದು ಕಳೆದ ವರ್ಷ ಇಲ್ಲಿ ಮಾನ್ಯ ನೀರಾವರಿ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಕೆಲಸ ಪ್ರಾರಂಭವಾಗಲಿಲ್ಲ. ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡಿದರೆ ಕಾದಿರಿಸಿದ ಅರಣ್ಯ ಪ್ರದೇಶಕ್ಕೆ ಹೆಚ್ಚು ತೊಂದರೆ ಬರುವುದಿಲ್ಲವೆಂದು, ಆದ್ದರಿಂದ ಈ ಕೆಲಸವನ್ನು ಯಾವ ತೊಂದರೆಯೂ ಇಲ್ಲದೆ ಪ್ರಾರಂಭ ಮಾಡಬಹುದೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೂ ಇದರ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಅಣೆಕಟ್ಟಿನ ಎತ್ತರವನ್ನು ಹತ್ತು ಅಡಿ ಕಡಿಮೆ ಮಾಡುವುದಕ್ಕೆ ನಿರ್ಣಯ ಕೈಕೊಂಡಿದ್ದೇವೆ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಫಾರೆಸ್ಟ್ ಏರಿಯಾವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಆದಕ್ಕಾಗಿ ನಾವು ಅವರಿಗೆ ಪತ್ರ ಬರೆದಿದ್ದೇವೆ. ಅವರು ಒಪ್ಪಿಗೆ ಕೊಟ್ಟ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—ಅಲ್ಲಿ ರಸ್ತೆಗಳು ಮತ್ತು ಕ್ವಾಸ್-ವೇ ಕೆಲಸಗಳು ಏನು ನಡೆಯುತ್ತಿವೆ, ಅವು ಸರ್ವಕಾಲಕ್ಕೂ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಆಗುವುದು ಒಳ್ಳೆಯದು. ಆದರೆ ಅಲ್ಲಿ ಸ್ವಲ್ಪ ಮೇಲಿಂಗಡೆ ಒಂದು ಸೇತುವೆಯನ್ನು ಈ ಯೋಜನೆಯ ಕೆಲಸಕ್ಕೆ ಮಾತ್ರ ಅನುಕೂಲವಾಗುವಂತೆ ಕಟ್ಟುತ್ತಿದ್ದಾರೆ. ಇದಕ್ಕೆ ಬದಲು ಸ್ವಲ್ಪ ಕೆಳಭಾಗದಲ್ಲಿ ಕಟ್ಟಿದರೆ ಅಲ್ಲಿನ ಸಾರ್ವಜನಿಕರಿಗೂ ಇದರಿಂದ ಅನುಕೂಲವಾಗುತ್ತದೆ. ಆದ್ದರಿಂದ ರಸ್ತೆ ಮತ್ತು ಸೇತುವೆ ಕೆಲಸಗಳನ್ನು ಜನರಿಗೆ ಅನುಕೂಲವಾಗುವಂತೆ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಪರಿಶೀಲನೆ ಮಾಡುತ್ತೇನೆ.

ಪುತ್ತೂರು ಬೈಪಾಸ್ ರಸ್ತೆಯ ಕಾಮಗಾರಿ

೨೫೩೭. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಬೈಪಾಸ್ ರಸ್ತೆ ಅಗತ್ಯತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೈಪಾಸು ರಸ್ತೆಯ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

ಇ) ಈ ಕಾಮಗಾರಿಯನ್ನು ಯಾವ ವರ್ಷದಲ್ಲಿ ಪೂರ್ತಿಗೊಳಿಸುವ ನಿರೀಕ್ಷೆ ಇದೆ ?

ಈ) ಈ ವರ್ಷ ಬೈಪಾಸು ರಸ್ತೆಗೆ ಆಯವ್ಯಯದಲ್ಲಿ ಒದಗಿಸಿರುವ ಹಣದ ಮೊತ್ತವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬಂದಿದೆ.

ಆ) ಬೈಪಾಸ್ ರಸ್ತೆಗೆ ಬೇಕಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ೨೧ ಲಕ್ಷ ರೂ.ಗಳ ಅಂದಾಜಿಗೆ ಒಪ್ಪಿಗೆ ನೀಡಲಾಗಿದ್ದು ಭೂಸ್ವಾಧೀನ ಕೆಲಸವು ಪ್ರಗತಿಯಲ್ಲಿದೆ.

ಇ) ರಸ್ತೆಗೆ ಬೇಕಾದ ಭೂಮಿಯನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದ ಮೇಲೆ, ಈ ಬೈಪಾಸ್ ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಹಣಕಾಸು ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು.

ಈ) ೮ ಲಕ್ಷ ರೂಪಾಯಿಗಳು (ಭೂಸ್ವಾಧೀನಕ್ಕೆ)